ದಿವ್ಯ ಮುಹೂರ್ತದಲ್ಲಿ ಅಜ್ಜಿಗೆ ತಿಳಿಯದಂತೆ ಮನೆಯಿಂದ ಹೊರಬಿದ್ದೆವು. ಮೆತ್ತಿಯ ನೆಲದ ಮೇಲೆ ಶತಮಾನಗಳಿಂದ ದೂಳು ತಿನ್ನುತ್ತಾ ಮಲಗಿದ್ದ ಹಳೆಯ ಪತ್ರಿಕೆಗಳ ಮೇಲೆ ಅಡನಾಡಿ ಬೆಕ್ಕೊಂದು ಚರಪರ ಸದ್ದು ಮಾಡುತ್ತ ಓಡಾಡುತ್ತಿತ್ತು. ಅಷ್ಟೇ ಗದ್ದಲ, ಅಷ್ಟೂ ಮೌನ. ನಮಗಿಂತಲೂ ಮೊದಲೇ ಕೇಶಪ್ಪಚ್ಚಿ ಕಟ್ಟೆ ಹತ್ತಿರ ಬಂದು ಯಾರೂ ಇಲ್ಲದ್ದನ್ನು ಖಚಿತ ಪಡಿಸಿಕೊಂಡು, ನಿಧಾನವಾಗಿ ನೀರಿಗಿಳಿದು ಪಾತಿ ದೋಣಿಯ ಹಗ್ಗ ಬಿಚ್ಚತೊಡಗಿದ್ದ. ಅಘನಾಶಿನಿಯಂತಹ ನದಿ ತೀರದ ಹಳ್ಳಿಯಲ್ಲಿ ಆ ಮಧ್ಯಾಹ್ನ ಅಷ್ಟು ನಿರ್ಜನವಾಗಿರುವುದೆಂದೂ, ದೋಣಿಯನ್ನು ಅಷ್ಟು ಸಲೀಸಾಗಿ ಬಿಡಿಸಿ ಪ್ರವಾಸ ಹೊರಡಬಹುದೆಂದೂ ಹೊರಗಿನವರು ಊಹಿಸಲು ಸಾಧ್ಯವಿಲ್ಲ. ಆದರೆ, ಈ ಅಮೃತಕ್ಷಣಕ್ಕಾಗಿ ನಾವು ಎಷ್ಟು ದಿನಗಳಿಂದ ಹೊಂಚು ಹಾಕುತ್ತಿದ್ದೆವು!

ತದಡಿಯತ್ತ ನಮ್ಮ ಪ್ರಯಾಣ ಶುರುವಾಯಿತು. ಒಂದೊಂದು ಕಡೆ ಇಬ್ಬಿಬ್ಬರು ಕೂರಬೇಕೆಂದು ಕೇಶಪ್ಪಚ್ಚಿ ನಿರ್ದೇಶಿಸಿದ. ನಿಧಾನವಾಗಿ ಹುಟ್ಟು ಹಾಕಿ ದೋಣಿ ಮುನ್ನಡೆಸತೊಡಗಿದ. ಪರವಾಗಿಲ್ಲ, ಕೇಶಪ್ಪಚ್ಚಿಗೆ ಚೆನ್ನಾಗಿಯೇ ದೋಣಿ ನಡೆಸಲು ಬರುತ್ತದೆ ಎಂದು ಖುಷಿ ಪಟ್ಟೆವು. ''ನೀರಿಗೆ ಕೈ ಹಾಕಬಾರದು'' ಎಂದು ಕೇಶಪ್ಪಚ್ಚಿ ಎಚ್ಚರಿಸುತ್ತಲೇ ಇದ್ದರೂ ನಾವು ಆ ಸೂಚನೆಯನ್ನು ನಿರ್ಲಕ್ಷಿಸಿದೆವು. ''ನೀವು ನದಿಯ ಕಡೆ ಬಗ್ಗಿ ಹಾಗೆ ಮಾಡುತ್ತಲೇ ಇದ್ದರೆ, ದೋಣಿ ವಾಲುತ್ತದೆ. ಯಾರಾದರೂ ಬಿದ್ದರೆ ಉಳಿಗಾಲವಿಲ್ಲ, ನೋಡಿ'' ಎಂದು ಕೇಶಪ್ಪಚ್ಚಿ ದೊಡ್ಡ ದನಿ ಮಾಡಿ ಎಚ್ಚರಿಸಿದ. ನಮಗೂ ಹಾಗೆ ಭಯವಾಗುತ್ತಿತ್ತು. ಆದರೂ ಅದೇನೋ ಉತ್ಸಾಹ, ಉದ್ರೇಕ. ಕೇಶಪ್ಪಚ್ಚಿಗೇನಾದರೂ ಭಯವಾಗುತ್ತಿದ್ದರೆ ಅವನು ಈಗ ಕುಳಿತುಕೊಳ್ಳಬಹುದೆಂದೂ, ಸ್ವಲ್ಪ ಹೊತ್ತು ತಾನು ದೋಣಿ ನಡೆಸುವುದಾಗಿಯೂ ಬಾಲಚಂದ್ರ ಅಭಯವಿತ್ತ! ''ಎಲಾ ಚೋಟುದ್ದ ಮಕ್ಕಳೇ, ನೀವೂ ನನಗೆ ಹೇಳುವವರಾದಿರಾ? ಇರಿ, ನಿಮ್ಮನ್ನೆಲ್ಲ ನೀರಿನಲ್ಲಿ ಮುಳುಗಿಸಿಬಿಡುತ್ತೇನೆ'' ಎಂದು ಕೇಶಪ್ಪಚ್ಚಿ ಒಮ್ಮೆಲೇ ಕೂಗಾಡತೊಡಗಿದ. ಅದಕ್ಕೆ ಸರಿಯಾಗಿ ದೊಡ್ಡ ಅಲೆಗಳು ಏಳಲಾರಂಭಿಸಿದವು. ಓಹೋ, ಭರತ ಶುರುವಾಯಿತೆಂದು ಊಹಿಸಿದೆವು. ಇಷ್ಟು ಹೊತ್ತೂ ಶಾಂತವಾಗಿದ್ದ ಅಘನಾಶಿನಿಯಲ್ಲಿ ಉಮ್ಮಳದ ಅಲೆಗಳು... ಇದು ನಮಗೆ ಹೊಸದಲ್ಲ. ಬೇಕಾದಷ್ಟು ಸಲ ದಡದಲ್ಲಿದ್ದು ಭರತ ಇಳಿತ ಕಂಡವರೇ. ದೋಣಿ ಪ್ರಯಾಣ ಮಾಡುವಾಗಲೂ ಭರತದ ರುದ್ರ ದೃಶ್ಯ ಕಂಡಿದ್ದಿದೆ. ಇಲ್ಲವೆಂದಲ್ಲ. ಅಂಥ ಸಂದರ್ಭಗಳಲ್ಲಿ ನಮಗಿದ್ದ ನಂಬಿಕೆ ನಾವಿಕನ ಕುರಿತಾದುದು. ಇಲ್ಲೀಗ ನಮ್ಮ ದೋಣಿ ನಡೆಸುತ್ತಿರುವವನು ಕೇಶಪ್ಪಚ್ಚಿ! ಕೇಶಮಳ್ಳ! ಏನಾದೀತು ನಮ್ಮ ಪರಿಸ್ಥಿತಿ? ಅದೂ ಬೇರೆ ನಾವೀಗ ನದಿಯ ಮಧ್ಯಕ್ಕೆ ಹತ್ತಿರವಾಗಿದ್ದೆವು. ಬಿಟ್ಟು ಬಂದ ತೀರವೂ ದೂರ, ಆ ಕಡೆ ತದಡಿಯೂ ದೂರವೇ. ಪಾತಿದೋಣಿ ಅತ್ತಿಂದಿತ್ತ ತುಯ್ದಾಡತೊಡಗಿತು. ''ಅಜ್ಜಾ, ಅಮ್ಮಾ, ಅಪ್ಪಾ, ಕೇಶಪ್ಪಚ್ಚಿ, ದೇವರೇ'' ಎಂದೆಲ್ಲ ನಾವು ಗಾಬರಿಬಿದ್ದು ಅರಚತೊಡಗಿದೆವು. ಇಷ್ಟು ಹೊತ್ತಿಗೆ ಕೇಶಪ್ಪಚ್ಚಿಯೂ ಹೆದರಿಕೊಂಡಂತೆ ಕಂಡ. ಅಘನಾಶಿನಿ ನದಿ, ''ನಾನು ನಿಮ್ಮ ಹುಚ್ಚಾಟಕ್ಕೆ ಬಗ್ಗುವವಳಲ್ಲ'' ಎಂಬಂತೆ ರೋಷಗೊಂಡಿತ್ತು. ಹೆಚ್ಚು ಕಡಿಮೆ ನದಿ ನೀರಲ್ಲಿ ದೋಣಿ ಮುಳುಗಿದಂತೇ ಆಗುತ್ತಿತ್ತು. ಅದಾವ ದೈವವೋ, ನಮ್ಮ ಮೊರೆ ಕೇಳುತ್ತಿತ್ತು, ಹಾಗಾಗಿಯೇ ಅಲೆಗಳ ಮೇಲೇರಿ ಕೆಳಗೆ ವಾಲಿ, ಜಾರುವಾಗಲೂ – ಸದ್ಯ ಮುಳುಗಲಿಲ್ಲ – ಮೈಯೆಲ್ಲ ಒದ್ದೆ. ''ಅರೇ, ಇನ್ನೂ ಬದುಕಿದ್ದೇವಾ – ಯಾರ ದನಿಯೋ, ಎಲ್ಲರ ದನಿಯೋ! ತಂಗಿಯಂತೂ ನನ್ನ ಕೈ ಹಿಡಿದು ಅಳತೊಡಗಿದಳು. ಇಂಥ ವಿಷಮ ಸನ್ನಿವೇಶಕ್ಕೆ ತಾನು ಕಾರಣನಾಗಿಬಿಟ್ಟೆ ಎಂಬ ಚಿಂತೆಯ ಗೆರೆಗಳು ಕೇಶಪ್ಪಚ್ಚಿಯ ಮುಖದಲ್ಲಿ ಕಂಡವು. ಅವನ ಇಡೀ ಮೈ ಬೆವರುತ್ತಿತ್ತು. ಅವನು ಕೈಲಿದ್ದ ಹುಟ್ಟನ್ನು ನೀರಲ್ಲಿ ತಳ್ಳುತ್ತಲೇ ಇದ್ದ. ಅದರಿಂದ ಏನು ಪ್ರಯೋಜನವಾಗುತ್ತಿತ್ತು ಎಂದು ಮಾತ್ರ ಅರ್ಥವಾಗಲಿಲ್ಲ. ಏನೇನೋ ಹಲುಬುತ್ತಿದ್ದ. ಒಮ್ಮೆಯಂತೂ ಆಕಾಶ ನೋಡಿ, ''ಎಂಥಾ ಸ್ಥಿತಿ ತಂದಿಟ್ಟೆ ದೇವರೇ, ಕರ್ಣನ ರಥ